ಶ್ರೀ ಆರ್.ವಿ.ದೇಶಪಾಂಡೆ (ಸಹಕಾರ ಸಚಿವರು):

ಅ) ರಾಜ್ಯದಲ್ಲಿನ ಸಹಕಾರ ಸಂಸ್ಥೆಗಳು ಸುಮಾರು ಶೇ.40ರಷ್ಟು ರೈತರ ಪತ್ತಿನ ಅಗತ್ಯಗಳನ್ನು ಪೂರೈಸುತ್ತಿವೆ.

ಆ) ಹೌದು.

ಇ) ಮತ್ತು ಈ) ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಪ್ರಕಾರ ಪ್ರತಿ ಪ್ರಾಥಮಿಕ ಸಹಕಾರ ಸಂಘದ ಆಡಳಿತ ಸಮಿತಿಯಲ್ಲಿ ಒಂದು ಸ್ಥಾನವನ್ನು ಮಹಿಳೆಯರಿಗೂ ಮತ್ತೊಂದು ಸ್ಥಾನವನ್ನು ಪರಿಶಿಷ್ಟ ಜಾತಿ/ವರ್ಗದವರಿಗೂ ಮೀಸಲಿರಿಸಲಾಗಿದೆ. ಅಲ್ಲದೆ ಸರ್ಕಾರದ ನಾಮನಿರ್ದೇಶನ ಮಾಡುವಾಗ ಒಂದು ಸ್ಥಾನವನ್ನು ಮಹಿಳೆಯರಿಗೂ ಮತ್ತೊಂದು ಸ್ಥಾನವನ್ನು ಪರಿಶಿಷ್ಟ ಜಾತಿ/ವರ್ಗದವರಿಗೂ ಮೀಸಲಿಡುವುದು ಕಡ್ಡಾಯವಾಗಿರುತ್ತದೆ.

ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿರುವಂತೆ ಸಹಕಾರ ಸಂಸ್ಥೆಗಳಲ್ಲಿ ಮೀಸಲಾತಿ ಮಾಡಬೇಕಾಗಿದ್ದರೆ ಸಹಕಾರಿ ಸಂಸ್ಥೆಗಳನ್ನು ಭಾರತದ ಸಂವಿಧಾನದ ಪರಿಚ್ಛೇದ 12ರಡಿ ತರಬೇಕಾಗುತ್ತದೆ.

1470(1774) ಶ್ರೀ ಪಾಟೀಲ್ ಡಿ.ಆರ್.(ಗದಗ್) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಹಕಾರ ವಿಷಯ ಸಮಿತಿಗಳ ಶಿಫಾರಸ್ಸಿನ ಪ್ರಕಾಶ ಮಾಲುಗಳ ಮಾರಾಟವಾದ ಕೂಡಲೇ ರೈತರಿಗೆ ಕೊಡಬೇಕಾಗುವ ಹಣವನ್ನು ತಕ್ಷಣ ಕೊಡುವ ಸಂಬಂಧದಲ್ಲಿ ರೂಪಿತವಾಗಿರುವ ಕಾನೂನನ್ನು 6 ವರ್ಷಗಳು ಕಳೆದರೂ ಅನುಷ್ಠಾನಗೊಳಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಈ ರೀತಿ ನಿರ್ಲಕ್ಷ ಮಾಡಿ ರೈತರಿಗೆ ಆಗುತ್ತಿರುವ ಅನ್ಯಾಯವನ್ನು ಮುಂದುವರೆಸುವುದು ಈ ಸರ್ಕಾರದ ನಿಲುವೆ;

ಇ) ಈ ಕಾನೂನನ್ನು ಅನುಷ್ಠಾನಗೊಳಿಸಲು ಅವಶ್ಯವಿರುವ ಎಲ್ಲಾ ಕ್ರಮಗಳನ್ನು ಇದೇ ಸಾಲಿನ ನವೆಂಬರ್ 1 ರೊಳಗಾಗಿ ಕೈಗೊಂಡು ಈ ಅನ್ಯಾಯ ತಡೆಗಟ್ಟಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಪ್ರಕಾಶ್.ಭಾ ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು)

ಅ) ಬಂದಿದೆ.

ಆ) ಮತ್ತು ಇ) ಇಲ್ಲ ಈ ವಿಷಯವು ತೀವ್ರ ಪರಿಶೀಲನೆಯಲ್ಲಿದ್ದು, ಕಾನೂನನ್ನು ಅನುಷ್ಠಾನಗೊಳಿಸುವಲ್ಲಿರುವ ತೊಡಕುಗಳನ್ನು ನಿವಾರಿಸುವ ಮೂಲಕ ಅತೀ ಶೀಘ್ರದಲ್ಲಿ ಉಪಬಂಧಗಳನ್ನು ಜಾರಿಗೊಳಿಸುವ ಬಗ್ಗೆ ಕ್ರಮ ವಿಧಾನವನ್ನು ರೂಪಿಸಲಾಗುತ್ತಿದೆ.

1471(1775) ಶ್ರೀ ಪಾಟೀಲ್ ಡಿ.ಆರ್.(ಗದಗ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಸಾಗುವಳಿ ಜಮೀನೆಷ್ಟು ಇದರಲ್ಲಿ ಸಣ್ಣ ಭಾರಿ ಹಾಗೂ ಮಧ್ಯಮ ನೀರಾವರಿ ಯೋಜನೆಗಳಿಂದ ನೀರು ಪಡೆಯುತ್ತಿರುವ ಜಮೀನು ಎಷ್ಟು;

ಆ) ಇದು ಒಟ್ಟು ಸಾಗುವಳಿ ಜಮೀನಿನ ಪ್ರತಿಶತ ಪ್ರಮಾಣವೆಷ್ಟಾಗಿದೆ;

ಇ) ಬಾವಿ ಹಾಗೂ ಬೋರ್‌ವೆಲ್‌ಗಳಿಂದ ನೀರಾವರಿ ಸೌಲಭ್ಯ ಹೊಂದಿರುವ ಜಮೀನೆಷ್ಟು (ಇದರ ಪ್ರತಿಶತ ಪ್ರಮಾಣವೆಷ್ಟು);

ಈ) ಮೇಲಿನ ಎಲ್ಲಾ ಜಮೀನು ಬಿಟ್ಟು ಮಳೆಯಾಶ್ರಿತ ಕೃಷಿ ಮಾಡುವ ರೈತರೆಷ್ಟು ಮತ್ತು ಅದರ ಜಮೀನು ಎಷ್ಟು;

ಉ) ಈ ಜಮೀನಿನಲ್ಲಿ ಈ 5 ವರ್ಷಗಳಲ್ಲಿ ನೀರು ಮತ್ತು ಮಣ್ಣಿನ ಸಂರಕ್ಷಣೆಗೊಳಪಟ್ಟ ಜಮೀನು ಎಷ್ಟು;

ಊ) ಉಳಿದೆಲ್ಲ ಜಮೀನಿನಲ್ಲಿ ನೀರು ಮತ್ತು ಮಣ್ಣಿನ ಸಂರಕ್ಷಣೆಗೊಳಪಡಿಸುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಬೇಕಾಗುವ ಹಣ ವೆಷ್ಟು;

ಋ) ಈ ಹಣವನ್ನು ಮುಂದಿನ ನಾಲ್ಕು ವರ್ಷಗಳಲ್ಲಿ ಜೋಡಿಸಿ ಮಳೆಯಾಶ್ರಿತ ಕೃಷಿಕರ ಜೀವನ ಸುಧಾರಿಸುವಲ್ಲಿ ಉಪಯೋಗಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು):

ಅ) ಒಟ್ಟು ಸಾಗುವಳಿ ಭೂಮಿ 102.59 ಲಕ್ಷ ಹೆಕ್ಟೇರ್ ಪ್ರದೇಶವಾಗಿರುತ್ತದೆ. ಇದರಲ್ಲಿ ನೀರಾವರಿ ಜಮೀನು 23.00 ಲಕ್ಷ ಹೆಕ್ಟೇರ್ ಪ್ರದೇಶ.

ಆ) ಶೇ.22.42 ಪ್ರಮಾಣದಲ್ಲಿದೆ.

ಇ) 9.59 ಲಕ್ಷ ಹೆಕ್ಟೇರ್ ಪ್ರದೇಶವು ಭಾವಿ ಮತ್ತು ಬೋರ್‌ವೆಲ್‌ಗಳಿಂದ ನೀರಾವರಿ ಜಮೀನಾಗಿರುತ್ತದೆ. ಇದು ಒಟ್ಟು ನೀರಾವರಿ ಜಮೀನಿನ ಶೇ.41.69 ರಷ್ಟಾಗುತ್ತದೆ.

ಈ) ಮಾಳೆಯಾಶ್ರಿತ ಕೃಷಿ ಪ್ರದೇಶವು 84.00 ಲಕ್ಷ ಹೆಕ್ಟೇರ್‌ಗಳಾಗಿದ್ದು, ರೈತರ ಸಂಖ್ಯೆ ಅಂದಾಜು 43.81 ಲಕ್ಷ.

ಉ) ಜಲಾನಯನ ಅಭಿವೃದ್ಧಿ ಇಲಾಖೆ ಅಸ್ತಿತ್ವಕ್ಕೆ ಬಂದ ನಂತರ ಅಂದರೆ 2000–01 ರಿಂದ 2004–05ನೇ ಡಿಸೆಂಬರ್ ಅಂತ್ಯದವರೆಗೆ ಒಟ್ಟು 8.96 ಲಕ್ಷ ಹೆಕ್ಟೇರ್ ಪ್ರದೇಶವನ್ನು ನೀರು ಮತ್ತು ಮಣ್ಣಿನ ಸಂರಕ್ಷಣೆಗೊಳಪಡಿಸಿದೆ.

ಊ) ಮುಂದುವರಿದ ಯೋಜನೆಗಳನ್ನು ಹೊರತುಪಡಿಸಿ ಪ್ರತಿ ಹೆಕ್ಟೇರಿಗೆ ರೂ.6900 ರಂತೆ ಬಾಕಿ ಇರುವ ಪ್ರದೇಶವನ್ನು ಅಭಿವೃದ್ಧಿಪಡಿಸಲು ರೂ.4544.34 ಕೋಟಿಗಳು ಬೇಕಾಗುತ್ತದೆ.

ಋ) ಬಾಕಿ ಇರುವ ಮಳೆಯಾಶ್ರಿತ ಪ್ರದೇಶವನ್ನು ಜಲಾನಯನ ಅಭಿವೃದ್ಧಿಗೆ ಒಳಪಡಿಸಿ ಮುಂದಿನ 10 ವರ್ಷಗಳಲ್ಲಿ ಅನುಷ್ಠಾನಗೊಳಿಸಲು ಹಣ ನೀಡುವಂತೆ ಭಾರತ ಸರ್ಕಾರವನ್ನು ಈಗಾಗಲೇ ಕೋರಲಾಗಿದೆ. ಈ ಪ್ರದೇಶಗಳನ್ನು ಹಣದ ಲಭ್ಯತೆ ಆಧರಿಸಿ ಹಂತ ಹಂತವಾಗಿ ಅಭಿವೃದ್ಧಿಪಡಿಸಲಾಗುವುದು.

1472(779) ಶ್ರೀ ಪಾಟೀಲ್, ಎಸ್.ಎಸ್.(ಮುಂಡರಗಿ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮುಂಡರಗಿ ತಾಲ್ಲೂಕು ಬ್ಯಾಲವಾಡಗಿ ತೋಟಗಾರಿಕಾ ಪಾರಂಗೆ ತುಂಗಭದ್ರಾ ನದಿಯಿಂದ ನೀರು ಪೂರೈಸಲು ಮಂಜೂರಾದ ಯೋಜನೆಯ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆಯೇ;